ಹುಬ್ಬಳ್ಳಿ ವಿದ್ಯುತ್ ಸರಬರಾಜು
ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಾರ್ಯಾಲಯ,
ನವನಗರ, ಹಳೇ ಪೂ. ಬೆಂ. ರಸ್ತೆ, ಹುಬ್ಬಳ್ಳಿ–580 025.
Telephone No. : 0836-2223867

HUBLI ELECTRICITY SUPPLY
COMPANY LIMITED
(Wholly owned by Govt. of Karnataka undertaking)
Company Office,
Navanagar, Old P. B. Road, Hubballi-580 025.
E-mail ID : gmadmnnhr@hescom.co.in

Corporate Identity Number (CIN) : U31401KA2002SGC030437

ಸಂ.: ಹಚ್.ಸಿ.ಓ.-07/ಬಿ32/2016-17 ದಿನಾಂಕ: 29 APR 2021

# ಸುತ್ತೋಲೆ

ವಿಷಯ: ಕೋರೊನಾ ವೈರಸ್(COVID-19) ಹರಡುವಿಕೆ ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಹಾಗೂ ಕಛೇರಿಯ ಕೆಲಸಗಳ ಕಾರ್ಯನಿರ್ವಹಣೆ ಸುಗಮವಾಗಿ ನಡೆಸಲು ಅಗತ್ಯ ಕ್ರಮ ಜರುಗಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಸುತ್ತೋಲೆ ಸಂಖ್ಯೆ: ಸಿಆಸುಇ 87 ಡಿಇವಿ 2021 ಬೆಂಗಳೂರು ದಿನಾಂಕ : 20.04.2021.

2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಆದೇಶ ಸಂಖ್ಯೆ:RD/158/TNR/2020 Dtaed: 26.04.2021.

*****

ಇತ್ತೀಚೆಗೆ ಕೋವಿಡ್-19 ವೈರಾಣು ಕರ್ನಾಟಕ ರಾಜ್ಯದಲ್ಲಿ ತೀವ್ರವಾಗಿ ಹರಡುತ್ತಿರುವುದರಿಂದ, ಮುಂಜಾಗ್ರತಾ ಕ್ರಮವಾಗಿ ಉಲ್ಲೇಖ-2ರಲ್ಲಿನ ಆದೇಶದನ್ವಯ ಕರ್ನಾಟಕ ರಾಜ್ಯಾದ್ಯಂತ ದಿನಾಂಕ:27.04.2021 ರಿಂದ 12.05.2021ರವರೆಗೆ ಜನತಾ ಕರ್ಫ್ಯೂ ಘೋಷಿಸಿರುವ ಹಿನ್ನೆಲೆಯಲ್ಲಿ, ಹುವಿಸಕಂನಿಯ ದೈನಂದಿನ ಕೆಲಸ ಕಾರ್ಯಗಳ ಸುಗಮ ನಿರ್ವಹಣೆಗಾಗಿ ಹುವಿಸಕಂನಿ.,ಯ ಎಲ್ಲಾ ಅಧಿಕಾರಿ/ನೌಕರರು ಈ ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

1. ಕೆಲಸ ನಿರ್ವಹಿಸುವ ಸಿಬ್ಬಂದಿಗಳಿಗೆ ಮಾಸ್ಕ ಧರಿಸುವುದು ಕಡ್ಡಾಯವಾಗಿರುತ್ತದೆ. ಆಗಾಗ್ಗೆ ಸ್ಯಾನಿಟೈಜರ್/ಸಾಬೂನು/ಕೈತೊಳೆಯುವ ದ್ರಾವಣಗಳಿಂದ ಕೈಗಳನ್ನು ಶುಚಿಗೊಳಿಸುವುದು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.
2. ಕೋವಿಡ-19 ಪ್ರಕರಣಗಳನ್ನು ಹರಡುವುದನ್ನು ತಡೆಗಟ್ಟಲು ಕಛೇರಿಗೆ ಬರುವ ಎಲ್ಲಾ ವಾಹನಗಳು, ಪ್ರವೇಶ ದ್ವಾರಗಳು, ಸಭೆಯ ಸಭಾಂಗಣಗಳು, ಆವರಣ, ಗೋಡೆಗಳು, ಶೌಚಾಲಯಗಳಲ್ಲಿ ಹಾಗೂ ಕಛೇರಿಯಲ್ಲಿ ಸ್ವಚ್ಛತಾ ಹಾಗೂ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು.
3. ಕಛೇರಿ/ಶಾಖೆಯ ಮುಖ್ಯಸ್ಥರುಗಳು ತಮ್ಮ ಕಛೇರಿ/ಶಾಖೆಗೆ ಸಂಬಂಧಿಸಿದಂತೆ ತುರ್ತು/ಅಗತ್ಯ ಕೆಲಸ ಕಾರ್ಯಗಳಿಗೆ ಅಡಚಣೆಯಾಗದಂತೆ ಅಧಿಕಾರಿ/ನೌಕರರಿಗೆ ಕಛೇರಿಗೆ ಹಾಜರಾಗುವ ಕುರಿತಂತೆ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದಾಗಿದೆ.

(ಪು.ತಿ.ನೋ.)

4. ಎಲ್ಲಾ ಕ್ಷೇತ್ರ ಅಧಿಕಾರಿಗಳು, ನಿರ್ವಹಣಾ ಸಿಬ್ಬಂದಿಗಳು, ಎಲ್ಲಾ 33/11ಕೆ.ವಿ. ಸ್ಟೇಷನ್ ಪಾಳೆ ಹಾಗೂ ನಿರ್ವಹಣೆ ಅಧಿಕಾರಿ/ನೌಕರರು, 24*7 ಗ್ರಾಹಕರ ಸೇವಾ ಸಿಬ್ಬಂದಿಗಳು ಹಾಗೂ ಎ.ಎಲ್.ಡಿ.ಸಿ./ಸ್ಕಾಡಾ ದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ಎಂದಿನಂತೆ ಕಾರ್ಯನಿರ್ವಹಿಸುವುದು. ಸಂಬಂಧಪಟ್ಟ ಕಛೇರಿಯ ಮುಖ್ಯಸ್ಥರು/ನೋಡಲ್ ಅಧಿಕಾರಿಗಳು ಹಾಲಿ ಲಭ್ಯವಿರುವ ವಾಹನಗಳ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳುವುದು.
5. ಸರ್ಕಾರದ ಆದೇಶದಂತೆ ದೃಷ್ಟಿಹೀನ ಹಾಗೂ ಇತರ ದೈಹಿಕ ಅಂಗವೈಕಲ್ಯ ಹೊಂದಿರುವ ಅಧಿಕಾರಿ/ ಸಿಬ್ಬಂದಿ ಮತ್ತು ಗರ್ಭಿಣಿ ಮಹಿಳಾ ಸಿಬ್ಬಂದಿಗಳು ಕಛೇರಿಗೆ ಹಾಜರಾಗುವುದರಿಂದ ವಿನಾಯಿತಿ ನೀಡಲು ಕ್ರಮ ಕೈಗೊಳ್ಳುವುದು.
6. ಕಛೇರಿಯಲ್ಲಿ ಸಾರ್ವಜನಿಕರು, ಗ್ರಾಹಕರು ಮತ್ತು ಗುತ್ತಿಗೆದಾರರ ಪ್ರವೇಶವನ್ನು ಕಡಿಮೆಗೊಳಿಸುವುದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ವಿದ್ಯುತ್/ ಆಡಳಿತಾತ್ಮಕ ಸಮಸ್ಯೆಗಳನ್ನು ದೂರವಾಣಿ/ ಮೋಬೈಲ್ ಮೂಲಕ ಸಂಬಂಧಿತ ಸಿಬ್ಬಂದಿಗಳನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳಲು ಕ್ರಮ ಜರುಗಿಸುವುದು.
7. ಅವಶ್ಯಕ ಸಂದರ್ಭಗಳಲ್ಲಿ ಸ್ವಂತ ವಾಹನವಿಲ್ಲದ ಅಧಿಕಾರಿ/ನೌಕರರಿಗೆ ಕಛೇರಿಗೆ ಆಗಮಿಸಲು ಮತ್ತು ನಿರ್ಗಮಿಸಲು ಕಛೇರಿಗಳಲ್ಲಿ ಹಾಲಿ ಲಭ್ಯವಿರುವ ವಾಹನಗಳ ವ್ಯವಸ್ಥೆ ಮಾಡಲು ಕಛೇರಿ ಮುಖ್ಯಸ್ಥರು ಕ್ರಮ ಕೈಗೊಳ್ಳುವುದು.
8. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರ/ ಕರ್ನಾಟಕ ಸರ್ಕಾರ ಕಾಲ ಕಾಲಕ್ಕೆ ಹೊರಡಿಸುವ ಸುತ್ತೋಲೆ/ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವುದು.
9. ಹುವಿಸಕಂನಿ.,ಯ ಎಲ್ಲಾ ಕಛೇರಿಗಳಲ್ಲಿ ಬಯೋಮೆಟ್ರಿಕ್ ಉಪಕರಣದಲ್ಲಿ ಹಾಜರಾತಿ ದಾಖಲಿಸುವುದನ್ನು ಸಧ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಸದರಿ ಅವಧಿಯಲ್ಲಿ ಸಂಬಂಧಿಸಿದ ಕಛೇರಿ/ಶಾಖಾ ಮುಖ್ಯಸ್ಥರುಗಳು ತಮ್ಮ ಅಧೀನ ಸಿಬ್ಬಂದಿಗಳ ಹಾಜರಾತಿ ಪುಸ್ತಕವನ್ನು ನಿಯಮಾನುಸಾರ ನಿರ್ವಹಿಸುವುದು.
10. ಈ ಸುತ್ತೋಲೆಯು ದಿನಾಂಕ: 12.05.2021ರವರೆಗೆ ಅಸ್ತಿತ್ವದಲ್ಲಿರುತ್ತದೆ

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಹುವಿಸಕಂನಿ.,
ಹುಬ್ಬಳ್ಳಿ ಇವರಿಂದ ಅನುಮೋದಿಸಲ್ಪಟ್ಟಿದೆ."

(ಸಹಿ) 22/4
ಪ್ರಧಾನ ವ್ಯವಸ್ಥಾಪಕರು
[ಆಡಳಿತ ಮತ್ತು ಮಾ.ಸಂ.ಅ.]

**ಪ್ರತಿಗಳು:**

1. ಮುಖ್ಯ ಇಂಜಿನೀಯರ್[ವಿದ್ಯುತ್], ಹುಬ್ಬಳ್ಳಿ /ಬೆಳಗಾವಿ ವಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ/ಬೆಳಗಾವಿ.
2. ಆರ್ಥಿಕ ಸಲಹೆಗಾರರು[ಆಂತರಿಕ ಪರಿಶೋಧನೆ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
3. ಪ್ರಧಾನ ವ್ಯವಸ್ಥಾಪಕರು[ತಾಂತ್ರಿಕ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
4. ಅಧೀಕ್ಷಕ ಇಂಜಿನೀಯರ್[ವಿದ್ಯುತ್] (ಟಿ&ಪಿ)/(ಪಿ.ಎಂ.ಸಿ)/ (ಐ.ಟಿ.&ಎಂ.ಟಿ.), ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
5. ಅಧೀಕ್ಷಕ ಇಂಜಿನೀಯರ್[ಕಾಮಗಾರಿ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
6. ಅಧೀಕ್ಷಕ ಇಂಜಿನೀಯರ್[ವಿದ್ಯುತ್], ಕಾರ್ಯ ಮತ್ತು ಪಾಲನೆ ವೃತ್ತ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ/ ಹಾವೇರಿ/ ಶಿರಸಿ/ ಚಿಕ್ಕೋಡಿ/ ಬಾಗಲಕೋಟೆ/ ಬೆಳಗಾವಿ/ ವಿಜಯಪೂರ.
7. ನಿಯಂತ್ರಣಾಧಿಕಾರಿ (ಲೆ ಮತ್ತು ಕಂ), ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
8. ಪೋಲೀಸ್ ಅಧೀಕ್ಷಕರು, ಹುವಿಸಕಂನಿ, ಜಾಗೃತದಳ, ಹುಬ್ಬಳ್ಳಿ.
9. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು [ತಾಂ.], ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರ ಹಿರಿಯ ಆಪ್ತ ಕಾರ್ಯದರ್ಶಿಗಳಿಗೆ.
10. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್[ವಿದ್ಯುತ್], ಕಾರ್ಯ ಮತ್ತು ಪಾಲನೆ ವಿಭಾಗ/ಎಮ್.ಟಿ. ವಿಭಾಗ/33ಕೆ.ವಿ. ಎಸ್ & ಎಲ್ ವಿಭಾಗ ಹು.ವಿ.ಸ.ಕಂ.ನಿ., ________
11. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್[ವಿದ್ಯುತ್], ಕಾರ್ಯ ಮತ್ತು ಪಾಲನೆ ಉಪ-ವಿಭಾಗ, ಹು.ವಿ.ಸ.ಕಂ.ನಿ., ______
12. ನಿರ್ದೇಶಕರು (ಹಣಕಾಸು) ಹಾಗೂ ಮುಖ್ಯ ಆರ್ಥಿಕ ಅಧಿಕಾರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರ ಆಪ್ತ ಕಾರ್ಯದರ್ಶಿಗಳಿಗೆ.
13. ಎಲ್ಲಾ ಶಾಖಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ಶಾಖೆ, ಹು.ವಿ.ಸ.ಕಂ.ನಿ., ______
14. ಕಛೇರಿ ಪ್ರತಿ/ ಮಹಾ ಕಡತ.